ಶ್ರೀ ಜೆ. ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳು).—

(ಎ) ದಿನಾಂಕ ೧-೪-೧೯೮೨ರಿಂದ ೨೮-೨-೧೯೮೩ರವರೆಗೆ ಕೋಲಾರ ಜಿಲ್ಲೆಗೆ ಮೂಲ ಸಾಮಗ್ರಿಗಳಾದ ಕಂಬ, ತಂತಿ ಮುಂತಾದುವುಗಳನ್ನು ಇಲಾಖೆಯವರು ಒದಗಿಸಿಲ್ಲವೆಂಬುದು ಸರಿಯಲ್ಲ. ಈ ಜಿಲ್ಲೆಯಲ್ಲಿ ಹಳ್ಳಿಗಳಿಗೆ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲು ಹಾಕಿಕೊಳ್ಳಲಾಗಿದ್ದು ಗುರಿಯನ್ನು ಸಾಧಿಸಲಾಗಿದೆ.

(ಆ) ರಾಜ್ಯದಲ್ಲಿ ಕೆಲವು ತೊಂದರೆಗಳಿದ್ದರೂ ಬೇಕಾದ ಸಾಮಗ್ರಿಗಳನ್ನು ನಿಯತವಾಗಿ ಸರಬರಾಜು ಮಾಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ವಿದ್ಯುತ್ ಪೂರೈಕೆ ಆಗುತ್ತಿರುವ ಬಗ್ಗೆ

(೪) ಶ್ರೀ ಜಿ. ಹೆಚ್. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ವಿದ್ಯುತ್ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ?

(ಎ) ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ವಿದ್ಯುಚ್ಛಕ್ತಿ ಪೂರೈಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ರೈತರು ವ್ಯವಸಾಯ ಕಸಬುಗಳಿಗೆ ನೀರೆತ್ತಲು ತೊಂದರೆಪಡುತ್ತಿರುವುದು ನಿಜವಲ್ಲವೆ ?

(ಇ) ಕೋಲಾರ ಜಿಲ್ಲೆಯನ್ನು ವಿದ್ಯುತ್ ಪೂರೈಕೆಯಿಂದ ವಿನಾಯಿತಿಗೊಳಿಸಲು ಸರ್ಕಾರ ಕೈಕೊಂಡಿರುವ ಅಥವಾ ಕೈಕೊಳ್ಳಬೇಕೆಂದಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಅಬ್ಕಾರಿ ಮಂತ್ರಿಗಳು).—

(ಎ) ಹೌದು.

(ಆ) ಕೆಲವೇ ತೊಂದರೆಗಳಿದ್ದರೂ ಇದನ್ನು ಪರಿಹಾರಗೊಳಿಸಲು ಸರ್ವಪ್ರಯತ್ನಗಳನ್ನು ಕೈಕೊಳ್ಳಲಾಗುತ್ತಿದೆ.

(ಇ) ಕೋಲಾರ ಜಿಲ್ಲೆಯ ರೈತರು ಅನುಭವಿಸುತ್ತಿರುವ ಈ ತೊಂದರೆಯನ್ನು ಪರಿಹರಿಸಲು ಲೋಡ್ ಷೆಡ್ಡಿಂಗನ್ನು ದಿನಾಂಕ ೧-೫-೮೩ರಿಂದ ಪ್ರತಿದಿನ ೬ರಿಂದ ೧೦ ಗಂಟೆವರೆಗೂ ಅದೂ ದಿನ ಬಿಟ್ಟು ದಿನ, ಅಂದರೆ ದಿನ ಒಂದಕ್ಕೆ ನಾಲ್ಕು ಗಂಟೆ ಕಾಲ ಮಾತ್ರ ನಿಗದಿಮಾಡಿದೆ. ಈ ಕ್ಲಪ್ತಕಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ರೈತರು ವಿದ್ಯುತ್ ಬಳಸಿಕೊಳ್ಳಬಹುದು. ಆದರೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಪ್ರತಿದಿನ ಆರು ಗಂಟೆಗಳ ಕಾಲ ಗ್ರಾಮೀಣ ಪೋಷಕ (ರೂರಲ್ ಫೀಡರ್ಸ್)ಗಳು ವಿದ್ಯುತ್ ಪ್ರಸಾರವನ್ನು ನಿಲ್ಲಿಸಲಾಗುತ್ತಿದೆ.

ಸರ್ಕಾರಕ್ಕೆ ಅಬ್ಕಾರಿ ಕಂಟ್ರಾಕ್ಟರುಗಳಿಂದ ಸಲ್ಲುವ ಅಂದಾಜು ಬಗ್ಗೆ

(೫) ಶ್ರೀ ಮಾನ್ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಎ) ಅಬ್ಕಾರಿ ಕಂಟ್ರಾಕ್ಟರುಗಳಿಂದ ವರ್ಷಕ್ಕೆ ಸರ್ಕಾರಕ್ಕೆ ಸಲ್ಲುವ ಅಂದಾಜು ವರಮಾನವೆಷ್ಟು?

(ಆ) ವರಮಾನ ತಂದು ಕೊಡುವ ಮುಖ್ಯ ವಿಭಾಗವಾದ ಸಾರಾಯಿ ಮತ್ತು ಹೆಂಡ ಮಾರುವವರನ್ನು ಅಬ್ಕಾರಿ ಕಂಟ್ರಾಕ್ಟರುಗಳು ವಿನಾ ಕಾರಣ ಬಜಾ ಮಾಡಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಈ ಸೇಂದಿ ಸಾರಾಯಿ ಮಾರುವವರಿಗೆ ನ್ಯಾಯ ದೊರಕಿಸಿ ಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುತ್ ಮಂತ್ರಿಗಳು). —

(ಅ) ಅಬ್ಕಾರಿ ಕಂಟಾಕ್ಟರುಗಳಿಂದ ಸರ್ಕಾರಕ್ಕೆ ೧೯೮೨-೮೩ರ ಸಾಲಿಗೆ ೧೨೩.೦೮ ಕೋಟಿ ರೂಪಾಯಿಗಳಷ್ಟು ಪರಮಾನವನ್ನು ನಿರೀಕ್ಷಿಸಲಾಗಿದೆ.

(ಆ) ಸಾರಾಯಿ ಮಾರಾಟಗಾರರನ್ನು (ವೆಂಡರ್) ವಜಾ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹೆಂಡ ಮಾರುವವರನ್ನು ವಜಾ ಮಾಡಿರುವ ವಿಷಯವು ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

(ಇ) ಈ ಪ್ರಶ್ನೆಯು ಈಗ ನ್ಯಾಯಾಲಯದಲ್ಲಿರುವುದರಿಂದ ಸರ್ಕಾರವು ನ್ಯಾಯ ದೊರಕಿಸಿ ಕೊಡುವ ಬಗ್ಗೆ ನ್ಯಾಯಾಲಯದ ತೀರ್ಪನ್ನು ಕಾಯಬೇಕಾಗುತ್ತದೆ.

PAPERS LAID ON THE TABLE

SRI A. LAKSHMISAGAR (Minister for Law and Parliamentary Affairs and Housing).—Sir, on behalf of Hon'ble Chief Minister I beg to lay :

"The Karnataka Agricultural Income tax (Amendment) ordinance, 1983 (Ordinance No. 3 of 1983)

as required under clause (1) of Article 213 of Constitution of India.

SRI A. LAKSHMISAGAR(Minister for Law and Parliamentary Affairs and Housing) .—Sir, on behalf of the Minister for Revenue I beg to lay :

(i) The Karnataka Rent Control (Amendment) Ordinance, 1983 (Ordinance No. 4 of 1983).

(ii) The Karnataka Prevention of Fragmentation and Consolidation of Holdings (Amendment) Ordinance, 1983 (Ordinance No. 5 of 1983)

as required under Clause (1) of Article 213 of Constitution of India.

MR. SPEAKER.—Papers laid.

ELECTION OF DEPUTY SPEAKER

SRI S. R. BOMMAI (Minister for Industries & Commerce).—Sir, I move :

"That Sri Veeranna be elected as Deputy Speaker of the Legislative Assembly".

SRI H. D. DEVEGOWDA (Minister for Public Works and Irrigation).—Sir, I second the motion.